ಓ ಎಸ್ ನಂಃ 127/2023
ಪಿ. ಡಬ್ಲ್ಯೂ-1

**(ಇಂದು ದಿನಾಂಕ 09-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ಪ್ರತಿವಾದಿ ನಂಃ 8 ಮತ್ತು 9 ರವರು ಏಕಪಕ್ಷಿಯವಾಗಿರುತ್ತಾರೆ .**

**ಪಾಟೀಸವಾಲುಃ ಪ್ರತಿವಾದಿ ನಂಃ 1 ರಿಂದ 7 ರವರ ಪರ ಶ್ರೀ ಪಿ ಎಸ್ ಯು ವಕೀಲರಿಂದ**

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ . ದಾವೆಯನ್ನು ಸಿದ್ದಪಡಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ . ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರವನ್ನು ಬರೆಯಲು ನಾನೇ ಮಾಹಿತಿ ಕೊಟ್ಟಿದ್ದೇನೆ . ನಾನು ಮೂಲತಃ ಕೃಷಿಕ . ನಮಗೆ ಕೃಷಿಯಿಂದ ಮಾತ್ರ ಆದಾಯ ಇದೆ , ಆದರೆ ಬೇರೆ ಯಾವುದೇ ಆದಾಯದ ಮೂಲಗಳು ಇಲ್ಲ . ನಮಗೆ ಕೃಷಿಯಿಂದ ಬರುವ ಆದಾಯದ ವಿವರಗಳನ್ನು ನನ್ನ ವಾದ ಪತ್ರ ಮತ್ತು ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ನಮೂದಿಸಿಲ್ಲ . ಸಾಕ್ಷಿಯು ಅಜಮಾಸು ಹೇಳಬಹುದು ಎಂದು ಸ್ವತಃ ಹೇಳುತ್ತಾರೆ . ನನ್ನ ಅಜ್ಜನ ಕಾಲದಿಂದಲೂ ಇಲ್ಲಿಯವರೆಗೆ ನಮಗೆ ಬರುವ ಉತ್ಪನ್ನದ ಮಾಹಿತಿಯನ್ನು ತೋರಿಸುವ ದಾಖಲೆಯನ್ನು ಹಾಜರುಪಡಿಸಿಲ್ಲ .

ನಮ್ಮ ಕುಟುಂಬದ ಮೂಲ ಪುರುಷ ಮಲ್ಲಪ್ಪ ಅವನು ಏನು ಉದ್ಯೋಗ ಮಾಡುತ್ತಿದ್ದ ಎಂದರೆ ಸಾಕ್ಷಿಯು ನಾವು ನೋಡಿಲ್ಲ ಎಂದು ಹೇಳುತ್ತಾರೆ . ಮಲ್ಲಪ್ಪನ ಮಕ್ಕಳಾದ ಗಂಗಪ್ಪ ಮತ್ತು ಸೋಮಪ್ಪ ಇವರುಗಳು ಸಹ ವೃತ್ತಿಯಿಂದ ಕೃಷಿಕರು . ಸದರಿ ಗಂಗಪ್ಪ ಮತ್ತು ಸೋಮಪ್ಪ ಇವರಿಗೂ ಸಹ ಕೃಷಿಯ ಹೊರತು ಬೇರೆ ಆದಾಯದ ಮೂಲಗಳು ಇರಲಿಲ್ಲ ಎಂದರೆ ಸರಿ .

1 ನೇ ಪ್ರತಿವಾದಿಯ ಗಂಡ ನನ್ನ ಅಣ್ಣನಿರುತ್ತಾನೆ . 1 ನೇ ಪ್ರತಿವಾದಿಯ ಗಂಡ ಬಿ.ಎಡ್ ಪದವಿ ಪಡೆದಿದ್ದ . 1 ನೇ ಪ್ರತಿವಾದಿಯ ಗಂಡ ಈಗ ಜೀವಂತವಿಲ್ಲ . 1 ನೇ ಪ್ರತಿವಾದಿಯ ಗಂಡ ತಾನು ಬದುಕಿರುವಾಗ ನಿಗದಿಯ ಪ್ರೌಢ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದ . 1 ನೇ ಪ್ರತಿವಾದಿಯ ಗಂಡ ಎಷ್ಟು ವರ್ಷಗಳ ಕಾಲ ತಾನು ಶಿಕ್ಷಕನಾಗಿ ಸೇವೆ ಸಲ್ಲಿಸಿದ್ದಾನೆ ಎಂದು ಕೇಳಿದರೆ

ಸಾಕ್ಷಿಯು ನೆನಪಿಲ್ಲ ಎಂದು ಹೇಳುತ್ತಾರೆ . 1 ನೇ ಪ್ರತಿವಾದಿಯ ಗಂಡ ಎಷ್ಟು ವರ್ಷಗಳ ಕಾಲ ತಾನು ಶಿಕ್ಷಕನಾಗಿ ಸೇವೆ ಸಲ್ಲಿಸಿದ್ದಾನೆ ಎನ್ನುವುದು ನನಗೆ ಗೊತ್ತಿದ್ದು ಸತ್ಯ ಹೇಳಿದರೆ ನಾನು ದಾಖಲಿಸಿರುವ ದಾವೆಗೆ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕಾಗಿ ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

1 ನೇ ಪ್ರತಿವಾದಿಯ ಗಂಡನಿಗೆ ಪ್ರತಿ ತಿಂಗಳು ಪಗಾರ ಬರುತ್ತಿತ್ತು ಎಂದರೆ ಸರಿ . ಸದರಿಯವರಿಗೆ ಎಷ್ಟು ಪಗಾರ ಬರುತ್ತಿತ್ತು ಎಂದು ಎಂದು ಹೇಳುಲು ಆಗುವುದಿಲ್ಲ . 1 ನೇ ಪ್ರತಿವಾದಿಯ ಗಂಡ ಸೇವಾ ನಿವೃತ್ತಿಯ ನಂತರ ಪಿಂಚಣಿಗೆ ಅರ್ಹನಾಗಿದ್ದರು ಎಂದರೆ ಸರಿ . 1 ನೇ ಪ್ರತಿವಾದಿಯ ಗಂಡ ತಾನು ಸಾಯುವರೆಗೆ ಪಿಂಚಣಿ ಪಡೆಯುತ್ತಿದ್ದ ಎಂದರೆ ಸರಿ . 1 ನೇ ಪ್ರತಿವಾದಿಗೆ ತನ್ನ ಗಂಡನ ಮರಣದ ಬಳಿಕ ಪಿಂಚಣಿ ಬರುತ್ತದೆ ಎಂದರೆ ಸರಿ ಆದರೆ ಎಷ್ಟು ಬರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ . 1 ನೇ ಪ್ರತಿವಾದಿಯ ಗಂಡ ಸೇವಾ ನಿವೃತ್ತಿಯಾದ ನಂತರ ಪಿಂಚಣಿ ಸೌಲಭ್ಯದ ಮೊತ್ತ ಬಂದಿರುವ ವಿಚಾರ ನನಗೆ ಗೊತ್ತಿಲ್ಲ . ನನ್ನ ಅಣ್ಣ ತನ್ನ ಪಗಾರಿನಲ್ಲಿ ಎಷ್ಟು ಖರ್ಚು ಮಾಡುತ್ತಿದ್ದ ಮತ್ತು ಎಷ್ಟು ಉಳಿತಾಯ ಮಾಡುತ್ತಿದ್ದ ಎನ್ನುವುದು ನನಗೆ ಗೊತ್ತಿಲ್ಲ . 1 ನೇ ಪ್ರತಿವಾದಿಯ ಗಂಡನ ಅವನ ಒಟ್ಟು ಸೇವಾ ಅವಧಿಯ ಆದಾಯ ಮತ್ತು ಖರ್ಚಿನ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ . 1 ನೇ ಪ್ರತಿವಾದಿಯ ಗಂಡ ತಾನು ಬದುಕಿರುವಾಗ ತನಗೆ ಬರುತ್ತಿರುವ ಪಗಾರಿನಲ್ಲಿ ಯಾವ ಯಾವ ವ್ಯವಹಾರ ಯಾರ ಜೊತೆ ಮಾಡಿದ್ದಾನೆ , ಯಾವಾಗ ಮಾಡಿದ್ದಾನೆ ಎನ್ನುವ ಕುರಿತು ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನನಗೆ ಹೇಳುತ್ತಿರಲಿಲ್ಲ ಎಂದು ಹೇಳುತ್ತಾರೆ . 1 ನೇ ಪ್ರತಿವಾದಿಯ ಗಂಡ ಬದುಕಿರುವಾಗ ತನ್ನ ಪಗಾರಿನಿಂದ ಎಷ್ಟು ಖರ್ಚು ಮಾಡುತ್ತಿದ್ದಾನೆ , ಎಷ್ಟು ಉಳಿತಾಯ ಮಾಡುತ್ತಿದ್ದಾನೆ , ಯಾವ ಯಾವ ವ್ಯವಹಾರ ಮಾಡುತ್ತಿದ್ದಾನೆ ಇತ್ಯಾದಿ ಮಾಹಿತಿಯನ್ನು ನಾನು ಕೇಳಲಿಲ್ಲ .

ಈ ದಾವೆಯ 2 ನೇ ಪ್ರತಿವಾದಿ ನನ್ನ ಅಣ್ಣ ಮಲ್ಲಪ್ಪನ ಮಗ ಇರುತ್ತಾನೆ . 2 ನೇ

ಪ್ರತಿವಾದಿ ಏನು ಉದ್ಯೋಗ ಮಾಡುತ್ತಾನೆ ಎಂದು ಕೇಳಿದರೆ ಸಾಕ್ಷಿಯು ಒಟ್ಟು ಕುಟುಂಬದಿಂದ ತಾನೇ ಸ್ವಂತ ದುಡ್ಡು ಹಾಕಿ ಒಂದು ಆಯಿಲ್ ಫ್ಯಾಕ್ಟರಿ ಹಾಕಿಕೊಟ್ಟಿದ್ದಾನೆ ಎಂದು ಹೇಳುತ್ತಾರೆ . ಆಯಿಲ್ ಫ್ಯಾಕ್ಟರಿ ಹಾಕಿಕೊಟ್ಟ ದಿನಾಂಕ , ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ . ಸದರಿ ಆಯಿಲ್ ಫ್ಯಾಕ್ಟರಿಯ ಹೆಸರು ನನಗೆ ಗೊತ್ತಿಲ್ಲ . ಸದರಿ ಆಯಿಲ್ ಫ್ಯಾಕ್ಟರಿ ಎಲ್ಲಿ ಅಸ್ತಿತ್ವದಲ್ಲಿದೆ ಎಂದು ನನಗೆ ಗೊತ್ತಿಲ್ಲ . ಸದರಿ ಆಯಿಲ್ ಫ್ಯಾಕ್ಟರಿ ಶುರು ಮಾಡಲು 60 ಲಕ್ಷ ರೂಪಾಯಿ ಬಂಡವಾಳ ವಿನಿಯೋಗಿಸಿದ್ದಾರೆ ಎಂದು ತಿಳಿದಿದ್ದೇನೆ . ಸದರಿ ಆಯಿಲ್ ಫ್ಯಾಕ್ಟರಿ ಶುರು ಮಾಡಲು ನಮ್ಮ ಒಟ್ಟು ಕುಟುಂಬದವರು ಕೂಡಿಕರಿಸಿದ್ದ ಒಟ್ಟು ರೂ. 60 ಲಕ್ಷ ನಮ್ಮಲ್ಲಿ ಇತ್ತು ಎಂದು ತೋರಿಸುವ ದಾಖಲೆ ಹಾಜರುಪಡಿಸಿಲ್ಲ . ಸದರಿ ಆಯಿಲ್ ಫ್ಯಾಕ್ಟರಿಯನ್ನು ಶುರು ಮಾಡಲು ಎಷ್ಟು ಸಾಲ ಮಾಡಿದ್ದಾರೆ ಎನ್ನುವ ಕುರಿತು ಮಾಹಿತಿ ಇಲ್ಲ . ಸದರಿ ಆಯಿಲ್ ಫ್ಯಾಕ್ಟರಿಯನ್ನು ಶುರು ಮಾಡುವ ಪೂರ್ವದಲ್ಲಿ 2 ನೇ ಪ್ರತಿವಾದಿ ಮೊಬೈಲ ಅಂಗಡಿ ನಡೆಸುತ್ತಿದ್ದ . ಸದರಿ ಮೊಬೈಲ ಅಂಗಡಿಯನ್ನು ಎಷ್ಟು ವರ್ಷಗಳ ಕಾಲ ನಡೆಸಿದ್ದಾನೆ ಎಂದು ನೆನಪಿಲ್ಲ . ಸದರಿ ಮೊಬೈಲ ಅಂಗಡಿಯಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ . 2 ನೇ ಪ್ರತಿವಾದಿ ಮೊಬೈಲ ಅಂಗಡಿಯ ನಂತರ ಚಹಾ , ಕಾಫಿ ಅಂಗಡಿ ಇಟ್ಟಿದ್ದ . ಸದರಿ ಚಹಾ , ಕಾಫಿ ಅಂಗಡಿಯನ್ನು ಎಷ್ಟು ವರ್ಷಗಳ ಕಾಲ ನಡೆಸಿದ್ದಾನೆ ಎಂದು ನನಗೆ ಗೊತ್ತಿಲ್ಲ . ಸದರಿ ಚಹಾ , ಕಾಫಿ ಅಂಗಡಿಯಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ನಾನು ತಿಳಿದುಕೊಂಡಿಲ್ಲ . 2 ನೇ ಪ್ರತಿವಾದಿಯು ಆಯಿಲ್ ಫ್ಯಾಕ್ಟರಿ ಹಾಕುವ ಮೊದಲು ಮೊಬೈಲ್ ಅಂಗಡಿ, ಚಹಾ , ಕಾಫಿ ಅಂಗಡಿ ಜೊತೆಗೆ ಆಯಿಲ್ ವಿತರಕರನಾಗಿದ್ದನು ಎಂದರೆ ಸರಿಯಲ್ಲ . 2 ನೇ ಪ್ರತಿವಾದಿಯು ಮಾಡುತ್ತಿರುವ ಉದ್ಯೋಗದ ಬಗ್ಗೆ ನನಗೆ ಮಾಹಿತಿ ಇದ್ದು ಈಗ ಸತ್ಯ ಒಪ್ಪಿಕೊಂಡರೆ ನನ್ನ ದಾವೆಗೆ ಪ್ರತಿಕೂಲವಾಗುತ್ತದೆ ಎನ್ನುವ ಕಾರಣಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . 2 ನೇ ಪ್ರತಿವಾದಿ ಆಯಿಲ್ ವಿತರಕರನಾಗಿದ್ದನು ಎಂದು ತೋರಿಸುವ ಎಲ್ಲಾ ಸರ್ಕಾರಿ ದಾಖಲೆಗಳು ಇದ್ದು ಅವುಗಳನ್ನು ನಾನು ನೋಡಿಲ್ಲ .

3 ನೇ ಪ್ರತಿವಾದಿ ನನ್ನ ಅಣ್ಣ ಮಲ್ಲಪ್ಪನ 2 ನೇ ಮಗ ಎಂದರೆ ಸರಿ . 3 ನೇ

ಪ್ರತಿವಾದಿಯು 2 ನೇ ಪ್ರತಿವಾದಿಯ ಜೊತೆ ಆಯಿಲ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾನೆ . 3 ನೇ ಪ್ರತಿವಾದಿ ತನ್ನ ಅಣ್ಣ ಮಲ್ಲಪ್ಪನ 2 ನೇ ಮಗ ಎಂದರೆ ಸರಿ . 3 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಜೊತೆ ಆಯಿಲ್ ಫ್ಯಾಕ್ಟರಿಯಲ್ಲಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾನೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ . 2 ನೇ ಪ್ರತಿವಾದಿ ಬೇರೆ ಬೇರೆ ವ್ಯವಹಾರಗಳನ್ನು ಯಾವಾಗಿನಿಂದ ಮಾಡುತ್ತಿದ್ದಾನೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ . ಪ್ರತಿವಾದಿ ನಂಃ 1 ರಿಂದ 3 ರವರ ವಾರ್ಷಿಕ ಉತ್ಪನ್ನದ ಕುರಿತು ನನಗೆ ಮಾಹಿತಿ ಇಲ್ಲ . ನನ್ನ ದಾವಾ ಪತ್ರದಲ್ಲಿ , ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಪ್ರತಿವಾದಿ ನಂಃ 1 ರಿಂದ 3 ಹಾಗೂ ನನ್ನ ಅಣ್ಣ ಮಲ್ಲಪ್ಪ ಇವರಿಗೆ ಇರುವ ಒಟ್ಟು ಉತ್ಪನ್ನಗಳ ವಿವರವನ್ನು ನಮೂದಿಸಿಲ್ಲ . ಪ್ರತಿವಾದಿ ನಂಃ 1 ರಿಂದ 3 ಹಾಗೂ ನನ್ನ ಅಣ್ಣ ಮಲ್ಲಪ್ಪ ಇವರಿಗೆ ಇರುವ ಒಟ್ಟು ಉತ್ಪನ್ನಗಳ ವಿವರವನ್ನು ನಾನು ನನ್ನ ದಾವಾ ಪತ್ರದಲ್ಲಿ, ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಹೇಳಿದರೆ ನನಗೆ ಪ್ರತಿಕೂಲವಾಗುತ್ತದೆ ಎನ್ನುವ ಕಾರಣಕ್ಕಾಗಿ ಅದನ್ನು ಮುಚ್ಚಿಟ್ಟಿದ್ದೇನೆ ಎಂದರೆ ಸರಿಯಲ್ಲ .

**ಪ್ರತಿವಾದಿ ನಂಃ 1 ರಿಂದ 7 ರವರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.